## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 07-12-2022

ಮಾರ್ಕೇಟ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 98/2022 ಕಲಂ 379 ಐಪಿಸಿ :-

ದಿನಾಂಕ 06-12-2022 ರಂದು 1000 ಗಂಟೆಯ ಸುಮಾರಿಗೆ ಫಿರ್ಯಾದಿ ಶ್ರೀ ಅಶೋಕ ರುಮಾಂಡಲಾ ತಂದೆ ವಿಠಲ ವಯ 34 ವರ್ಷ ಜಾತಿ ಪದ್ಮಾಶಾಲಿ ಉ;ಖಾಸಗಿ ಕಂಪನಿಯಲ್ಲಿ ಕೆಲಸ ಸಾ:ಕಡಪಲ ಗ್ರಾಮ ಮಂಡಲ ಸಿರಗಾಪೂರ ತಾ:ನಾರಾಯಣಖೇಡ್ ಸದ್ಯ ಮೆಡಚಲ್ ಹೈದ್ರಾಬಾದ ಇವರು ಠಾಣೆಗೆ ಹಾಜರಾಗಿ ತನ್ನ ಬಾಯಿ ಮಾತಿನ ಹೇಳಿಕೆ ಫಿರ್ಯಾದು ನೀಡಿದ್ದು ಸಾರಾಂಶವೆನAದರೆ, ಇವರ ಹತ್ತಿರ ಒಂದು ಹೊಂಡಾ ಸಿಬಿ ಶೈನ್ ದ್ವಿಚಕ್ರವಾಹನ. ನಂ. ಟಿ.ಎಸ್-08-ಎಫ್.ಝಡ್-5354 ಇದ್ದು ಇದರ ಚೆಸ್ಸಿ.ನಂ. ಎಮ್.ಇ.4ಜೆಸಿ65ಎಇಜೆಟಿ080183 ಇದ್ದು ಇದರ ಇಂಜಿನ್.ನA ಜೆಸಿ65ಇಟಿ2124977 ನೇದ್ದು ಇರುತ್ತದೆ. ಇದರ ಅ.ಕಿ.48000/-ರೂ ಇರುತ್ತದೆ. ಬೀದರ ನಗರದ ಶಾಹಪೂರ ಗೇಟಿಗೆ ಇರುವ ನನ್ನ ಅತ್ತೆ ಮಾವನ ಮನೆಯಲ್ಲಿ ಮದುವೆ ಇರುವದ್ದರಿಂದ ದಿನಾಂಕ 25-11-2022 ರಂದು ದ್ವಿಚಕ್ರವಾಹನದ ಮೇಲೆ ಮೆಡಚಲ್ ಹೈದ್ರಾಬಾದ ದಿಂದ ಬೀದರ ನಗರದ ಶಾಹಪೂರ ಗೇಟಿಗೆ ಬಂದು ತನ್ನ ದ್ವಿಚಕ್ರವಾಹನವನ್ನು ದಿನಾಂಕ 27-11-2022 ರಂದು ರಾತ್ರಿ 2000 ಗಂಟೆಯ ಸುಮಾರಿಗೆ ಮನೆ ಮುಂದೆ ನಿಲ್ಲಿಸಿ ಮಲಗಿಕೊಂಡಿದ್ದು ನಂತರ ದಿನಾಂಕ 28-11-2022 ರಂದು ಮುಂಜಾನೆ 0430 ಗಂಟೆಯ ಸುಮಾರಿಗೆ ಎದ್ದು ಮನೆಯ ಹೊರಗೆ ಬಂದು ನೋಡಲಾಗಿ, ನಿಲ್ಲಿಸಿದ ನನ್ನ ದ್ವಿಚಕ್ರವಾಹನ ಇರಲಿಲ್ಲಾ. ಯಾರೋ ಅಪರಿಚಿತ ಕಳ್ಳರು ದಿನಾಂಕ 28-11-2022 ರಂದು ರಾತ್ರಿ 0100 ಗಂಟೆಯಿAದ 0430 ಗಂಟೆಯ ಅವಧಿಯಲ್ಲಿ ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 175/2022 ಕಲಂ 379 ಐಪಿಸಿ :-

ದಿನಾಂಕ 03.12.2022 ರಂದು 14:05 ಗಂಟೆಗೆ ಪಿರ್ಯಾದಿ ನಾರಾಯಣ ತಂದೆ ಅರುಣ ಬೊರೊಳೆ ಸಾ:ಘೋಟಾಳ ರವರ ದೂರಿನ ಸಾರಾಂಶವೆನೆAದರೆ, ನಾರಾಯಣ ತಂದೆ ಅರುಣ ಬೊರುಳೆ ಸಾ// ಘೊಟಾಳ ತಾ// ಬಸವಕಲ್ಯಾಣ ಅರ್ಜಿ ಸಲ್ಲಿಸುವುದೆನೆಂದರೆ ಇವರ ಹತ್ತೀರ ಒಂದು ಹಿರೊ ಸ್ಪಲೇಂಡ ಮೋಟಾರ ಸೈಕಲ ನಂ. ಕೆಎ 56 ಹೆಚ್ 2577 ಇದ್ದು ಅದರ ಇಂಜೀನ ನಂ. ಹೆಚ್.ಎ.01ಇಆರ್ಇಎಚ್ಎಚ್52817 ಚೇಸಿ ನಂ. ಎಮ್.ಬಿ.ಎಲ್.ಎಚ್.ಎ.10ಬಿಆರ್ಇಎಚ್ಎಚ್67716 ಇರುತ್ತದೆ. ಅದು ಅಂದಾಜು 40,000/- ರೂಪಾಯಿ ಕಿಮ್ಮತಿನ್ನದ್ದು ಇರುತ್ತದೆ. ಹಿಗಿರುವಲ್ಲಿ ದಿನಾಂಕ 26/11/2022 ರಂದು ಬೀದರದಲ್ಲಿ ಮಗನಿಗೆ ಬೇಟ್ಟಿಯಾಗುವ ಕುರಿತು ಫಿರ್ಯಾದಿ ಮತ್ತು ಮತ್ತು ಸಂಬAಧಿ ಸತೀಷ ತಂದೆ ಧನರಾಜ ಡಗೆ ಇಬ್ಬರು ನನ್ನ ಮೋಟಾರ ಸೈಕಲ ನಂ. ಕೆಎ 56 ಹೆಚ 2577 ನೇದರ ಮೇಲೆ ನಮ್ಮ ಗ್ರಾಮದಿಂದ ಬೀದರಕ್ಕೆ ಹೊಗಿ ಮರಳಿ ಅದೆ ಮೋಟಾರ ಸೈಕಲ ಮೇಲೆ ಬೀದರದಿಂದ ಹೊರಟು ಹುಮನಾಬಾದಕ್ಕೆ ಬಂದು ರಾತ್ರಿ 8:30 ಗಂಟೆಗೆ ಹುಮನಾಬಾದ ಎಮ್.ಎಸ್. ಮೊತಿಮಲ್ ನೇದರಲ್ಲಿ ಊಟ ಮಾಡಲು ಹೊಗುವ ಕುರಿತು ಮೋಟಾರ ಸೈಕಲ ಎಮ್.ಎಸ್.ಮೊತಿಮಲ್ ಮುಂದೆ ಮೊಟಾರ ಸೈಕಲವನ್ನು ನಿಲ್ಲಿಸಿ ಹೊಟಲದಲ್ಲಿ ಹೊಗಿ ಊಟ ಮಾಡಿ ಮರಳಿ 9:00 ಗಂಟೆಗೆ ಬಂದು ನೊಡಲು ನಮ್ಮ ಮೋಟಾರ ಸೈಕಲ ಇರಲಿಲ್ಲಾ. ಯಾರೂ ಕಳ್ಳರು ಕಳವು ಮಾಡಿಕೊಂಡು ಹೊಗಿದ್ದು ಇರುತ್ತದೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಬೇಮಳಖೇಡಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 58/2022 ಕಲಂ 279, 338, 304(ಎ) ಐಪಿಸಿ ಜೊತೆ 187 ಐಎಮ್.ವಿ. ಕಾಯ್ದೆ :-

ದಿನಾಂಕಃ06-12-2022 ರಂದು ಸಾಯಂಕಾಲ 6-30 ಗಂಟೆಗೆ ಬೀದರ ಜಿಲ್ಲಾ ಸರಕಾರಿ ಆಸ್ಪತ್ರೆಯಿಂದ ರಸ್ತೆ ಅಫಘಾತದ ಮಾಹಿತಿ ಬಂದ ಮೇರೆಗೆ ಆಸ್ಪತ್ರೆಗೆ ಭೇಟಿ ನೀಡಿ ಫಿರ್ಯಾದಿ ಶ್ರೀ ವಿಲಾಸಕುಮಾರ ತಂದೆ ಶರಣಪ್ಪಾ ಬಡಿಗೇರ ಸಾಃಗೌಡನಹಳ್ಳಿ ಇವರ ಹೇಳಿಕೆ ಪಡೆದುಕೊಂಡಿದರ ಸಾರಾಂಶವೆನೆಂದರೆ, ದಿನಾಂಕಃ06-12-2022 ರಂದು ಸಾಯಂಕಾಲ 4-00 ಗಂಟೆಯ ಸುಮಾರಿಗೆ ಫಿರ್ಯಾದಿ ಸೋದರ ಮಾವ

ಸಾಯಿಬಣ್ಣಾ ಮತ್ತು ಅಜ್ಜಿ ತೇಜಮ್ಮಾ ಇಬ್ಬರು ಅವರ ದ್ವಿ ಚಕ್ರ ವಾಹನ ನಂ ಕೆಎ-32,ಹೆಚ್-9063 ನೇದರ ಮೇಲೆ ಕುಳಿತುಕೊಂಡು ಚಿಂಚೋಳಿಯಿಂದ ಮಂಗಲಗಿ ಕಡೆಗೆ ಹೋಗುವಾಗ ಮಾರ್ಗ ಮಧ್ಯೆ ವಿಠಲಪೂರ ಶಿವಾರದ ಚಾಂಗಲೇರಾ ವಿಠಲಪೂರ ರೋಡಿನ ಮೇಲೆ ಹೊಗುವಾಗ ಎದುರಿನಿಂದ ಅಂದರೆ ವಿಠಲಪೂರ ಗ್ರಾಮದ ಕಡೆಯಿಂದ ಬರುತ್ತಿದ್ದ ಕಾರ ನಂ ಕೆಎ-03,ಎಡಿ-2594 ನೇದರ ಚಾಲಕನು ತನ್ನ ಕಾರನ್ನು ಅತಿ ವೇಗ ಹಾಗೂ ನಿಷ್ಕಾಳಜಿತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ನಮ್ಮ ಸೋದರ ಮಾವನ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಮಾಡಿದ ಪ್ರಯುಕ್ತ ನಮ್ಮ ಸೋದರ ಮಾವ ಮತ್ತು ನಮ್ಮ ಅಜ್ಜಿ ವಾಹನ ಸಮೇತ ರೋಡಿನ ಮೇಲೆ ಬಿದ್ದು ನಮ್ಮ ಸೋದರ ಮಾವನ ಬಲಕಾಲ ಮೊಳಕಾಲ ಕೆಳಗೆ ಭಾರಿ ಕಟ್ಟದ ರಕ್ತಗಾಯ,ಬಲಗೈಗೆ ರಕ್ತಗಾಯವಾಗಿದ್ದು ಮತ್ತು ಅಜ್ಜಿಗೆ ಬಲಗೈಗೆ ಭಾರಿ ರಕ್ತಗಾಯ ಮತ್ತು ಗುಪ್ತಗಾಯವಾಗಿರುತ್ತದೆ ಮತ್ತು ಡಿಕ್ಕಿ ಮಾಡಿದ ಕಾರ ಚಾಲಕನು ತನ್ನ ಕಾರನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ ನಂತರ ಗಾಯಾಳುಗಳನ್ನು ಚಿಕಿತ್ಸೆ ಕುರಿತು 108 ಅಂಬುಲೆನ್ಸನಲ್ಲಿ ಬೀದರ ಜಿಲ್ಲಾ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದು ಚಿಕಿತ್ಸೆ ಫಲಕಾರಿಯಾಗದೆ ಅಜ್ಜಿ ತೇಜಮ್ಮಾ ಇವರು ಸಾಯಂಕಾಲ 5-40 ಪಿ ಎಂ ಗಂಟೆಯ ಸುಮಾರಿಗೆ ಮೃತಪಟ್ಟಿರುತ್ತಾಳೆ ಮತ್ತು ಸೋದರ ಮಾವನಿಗೆ ಹೆಚ್ಚಿನ ಚಿಕಿತ್ಸೆ ಕುರಿತು ಕಲಬುರಗಿಗೆ ಕಳುಹಿಸಿರುತ್ತೆವೆ ಅಂತಾ ವಿಷಯ ತಿಳಿಸಿರುತ್ತಾರೆ. ಕಾರಣ ದ್ವಿ ಚಕ್ರ ವಾಹನಕ್ಕೆ ಡಿಕ್ಕಿ ಮಾಡಿ ತನ್ನ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋದ ಕಾರ ನಂ ಕೆಎ-03,ಎಡಿ-2594 ನೇದರ ಚಾಲಕನ ವಿರುದ್ದ ಸೂಕ್ತ ಕಾನೂನು ಕ್ರಮ ಜರುಗಿಸಲು ಮಾನ್ಯರವರಲ್ಲಿ ವಿನಂತಿ ಇರುತ್ತದೆ.ಅಂತಾ ನೀಡಿದ ಫಿರ್ಯಾದಿ ಹೇಳಿಕೆ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿಕೊಂಡ ತನಿಖೆ ಕೈಗೋಳ್ಳಲಾಗಿದೆ.

ಭಾಲ್ಕಿ ಗ್ರಾಮೀಣ ಠಾಣೆ ಅಪರಾಧ ಸಂಖ್ಯೆ 161/2022 ಕಲಂ 32, 34 ಕೆಇ ಕಾಯ್ದೆ :-

ದಿನಾಂಕ: 06/12/2022 ರಂದು 0330 ಗಂಟೆಗೆ ಶ್ರೀ ನಂದಕುಮಾರ ಪಿ.ಎಸ.ಐ (ಕಾ.ಸು) ಭಾಲ್ಕಿ ಗ್ರಾಮೀಣ ಠಾಣೆ ರವರು ಪೆಟ್ರೋಲಿಂಗ ಮಾಡುತ್ತಿದ್ದಾಗ ಅಂದಾಜು ದಿನಾಂಕ: 06-12-2022 ರಂದು 00:30 ಗಂಟೆಯ ಸುಮಾರಿಗೆ ಅಂಬೆಸಾಂಗವಿ ಕಡೆಗೆ ಹೊಗುವಾಗ ಖಚಿತ ಮಾಹಿತಿ ಬಂದಿದ್ದೆನೆಂದರೆ ಬೀದರ ಉದಗೀರ ರೋಡ ವಳಸಂಗ ಕ್ರಾಸ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಅನಧಿಕೃತವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಅಂತ ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಿದಾಗ ವಳಸಂಗ ಹತ್ತಿರ ಬೀದರ ಉದಗೀರ ರೋಡಿನ ಮೇಲೆ ಅಪನಾ ಹೊಟೆಲ್ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಒಂದು ಗೊಬ್ಬರ ಚೀಲದಲ್ಲಿ ಸಾರಾಯಿಯನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುವುದನ್ನು ನೋಡಿ ಖಚೀತ ಪಡಿಸಿಕೊಂಡು ಪಂಚರ ಸಮಕ್ಷಮ, ಆತನ ಮೇಲೆ 01:45 ಗಂಟೆಗೆ ದಾಳಿ ಮಾಡಿ ನಂತರ ಆತನ ಹೆಸರು ಮತ್ತು ವಿಳಾಸ ವಿಚಾರಿಸಲು ಆತನು ತನ್ನ ಹೆಸರು ಮಹೇಶ ತಂದೆ ಮಾರುತಿ ಮಡಿವಾಳ 25 ವರ್ಷ ಜಾ: ಮಡಿವಾಳ(ಅಗಸ) ಉ: ಕೂಲಿ ಕೆಲಸ ಸಾ: ಬೆನಕನಳ್ಳಿ ಸದ್ಯ ವಳಸಂಗ ಕ್ರಾಸ ಅಂತಾ ತಿಳಿಸಿದನು. ನಂತರ ಆತನ ಮುಂದೆ ಇದ್ದ ಚೀಲದಲ್ಲಿ ಏನು ಇದೆ ಅಂತ ಪರಿಶೀಲಿಸಿ ನೋಡಲು ಅದರಲ್ಲಿ 1) 90 ಎಂಎಲ್ ವುಳ್ಳ 19 ವರಜಿನಲ್ ಚಾಯ್ಸ ಟೆಟ್ರಾ ಪಾಕೆಟಗಳು ಇದ್ದು ಪ್ರತಿಯೊಂದಕ್ಕೆ 35.13 ರೂ ಬೇಲೆ ಬಾಳುವದು ಇದ್ದು ಹೀಗೆ ಒಟ್ಟು ಅ.ಕಿ 667/- ರೂ, ಆಗಿರುತ್ತದೆ. 2) 180 ಎಮ್.ಎಲ್ 05 ಎಮ್.ಸಿ ಡ್ಯುವೆಲ್ಸ ವಿಸ್ಕಿ ಸಾರಾಯಿ ಬಾಟಲಗಳು ಇದರ ಮೇಲೆ ಪ್ರತಿಯೊಂದರ ಬೆಲೆ ಒಟ್ಟು 220/- ರೂ ಒಟ್ಟು 1102- ರೂ ಆಗುತ್ತದೆ, 3) 650 ಎಮ್.ಎಲ್ ಕಿಂಗಫಿಶರ ಸ್ಟರಾಂಗ ಬಿಯರ ಬಾಟಲ 01 ಇದರ ಬೆಲೆ 160/- ರೂ ಒಟ್ಟು 160/- ರೂ ಆಗುತ್ತದೆ, 4) 650 ಕಿಂಗ ಫಿಶರ ಪ್ರಿಮಿಯಮ್ ಬಿಯರ ಬಾಟಲಿಗಳು 03 ಇದರ ಪ್ರತಿಯೊಂದ ಬೆಲೆ 160/- ರೂ ಒಟ್ಟು 480/- ರೂ ಆಗುತ್ತದೆ.5) 180 ಎಮ್.ಎಲ್ 07 ಬ್ಯಾಗ ಪೇಪರ ಟೆಟ್ರಾ ಪಾಕೆಟಗಳು 743/- ರೂ ಆಗುತ್ತದೆ. ಹಾಗೂ 6) 180 ಎಮ.ಎಲ್ ಓಲ್ಡ ಟವರಿನ 02 ಟೆಟರಾ ಪಾಕೆಟಗಳು ಇದರ ಪ್ರತಿಯೊಂದ ಬೆಲೆ 86.75 ಒಟ್ಟು 173/- ಆಗುತ್ತದೆ. ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಭಾಲ್ಕಿ ಗ್ರಾಮೀಣ ಠಾಣೆ ಅಪರಾಧ ಸಂಖ್ಯೆ 162/2022 ಕಲಂ 32, 34 ಕೆಇ ಕಾಯ್ದೆ :-

ದಿನಾಂಕ: 06/12/2022 ರಂದು 1800 ಗಂಟೆಗೆ ಶ್ರೀ ನಂದಕುಮಾರ ಪಿ.ಎಸ.ಐ (ಕಾ.ಸು) ಭಾಲ್ಕಿ ಗ್ರಾಮೀಣ ಠಾಣೆ ರವರು ಠಾಣೆಯಲ್ಲಿದ್ದಾಗ ಶಿವಣಿ ಗ್ರಾಮದ ಕಾಸರ ತೂಗಾಂವ ರೋಡಿಗೆ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ

ಅನಧಿಕೃತವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಅಂತ ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಶಿವಣಿ ಗ್ರಾಮದ ಕಾಸರ ತೂಗಾಂವ ರೋಡಿಗೆ ಸ್ವಲ್ಪ ದೂರದಲ್ಲಿ 1625 ಗಂಟೆಗೆ ಹೋಗಿ ಜೀಪ ಮರೆಯಾಗಿ ನಿಲ್ಲಿಸಿ ನೋಡಲು ಶಿವಣಿ ಗ್ರಾಮದ ಭಾಲ್ಕಿ ಕಾಸರ ತೂಗಾಂವ ರೋಡಿನ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಒಂದು ಗೊಬ್ಬರ ಚೀಲದಲ್ಲಿ ಸಾರಾಯಿಯನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುವುದನ್ನು ನೋಡಿ ಖಚೀತ ಪಡಿಸಿಕೊಂಡು ಪಂಚರ ಸಮಕ್ಷಮ, ಸಿಬ್ಬಂದಿಯವರ ಸಹಾಯದಿಂದ ಆತನ ಮೇಲೆ 1630 ಗಂಟೆಗೆ ದಾಳಿ ಮಾಡಿ ನಂತರ ಆತನ ಹೆಸರು ಮತ್ತು ವಿಳಾಸ ವಿಚಾರಿಸಲು ಆತನು ತನ್ನ ಹೆಸರು ಹನೀಫ ತಂದೆ ಪಾಷಾಸಾಬ ಪಟೇಲ 49 ವರ್ಷ ಜಾ: ಮುಸ್ಲಿಂ ಉ: ವ್ಯಾಪಾರ ಸಾ:"ಶಿವಣಿ ಅಂತಾ ತಿಳಿಸಿದನು. ನಂತರ ಆತನ ಮುಂದೆ ಇದ್ದ ಚೀಲದಲ್ಲಿ ಏನು ಇದೆ ಅಂತ ಪರಿಶೀಲಿಸಿ ನೋಡಲು ಅದರಲ್ಲಿ 1) 90 ಎಂಎಲ್ ವುಳ್ಳ 25 ಯು.ಎಸ.ವಿಸ್ಕಿ ಪ್ಲಾಸ್ಟಿಕ ಬಾಟಲಿಗಳು ಇದ್ದು ಪ್ರತಿಯೊಂದಕ್ಕೆ 35.13 ರೂ ಬೇಲೆ ಬಾಳುವದು ಇದ್ದು ಹೀಗೆ ಒಟ್ಟು ಅ.ಕಿ 878/- ರೂ, ಆಗಿರುತ್ತದೆ. 2) 180 ಎಮ್.ಎಲ್ 02 ಒಲ್ಡ್ ಟವರಿನ ಟೆಟ್ರಾ ಪಾಕೆಟಗಳು ಇದರ ಮೇಲೆ ಪ್ರತಿಯೊಂದರ ಬೆಲೆ ಒಟ್ಟು 86.75/- ರೂ ಒಟ್ಟು 173- ರೂ ಆಗುತ್ತದೆ, 3) 650 ಎಮ್.ಎಲ್ 02 ಕಿಂಗಫಿಶರ ಸ್ಟ್ರಾಂಗ ಬಿಯರ ಬಾಟಲಗಳು ಪ್ರತಿಯೊಂದರ ಬೆಲೆ 160/- ರೂ ಒಟ್ಟು 320/- ರೂ ನೇದ್ದನ್ನು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.